**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | 206 |
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 06.03.2025 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2023–24; 2024–25 ಮತ್ತು 2025–26 ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಒಂದು ದಿನದ ಮದ್ಯ ಮಾರಾಟಕ್ಕೆ ನೀಡಿದ ಪರವಾನಗಿ ಎಷ್ಟು;<br>(ಜಿಲ್ಲಾವಾರು ವಿವರ ನೀಡುವುದು) | 2023–24 ಮತ್ತು 2024–25 ನೇ ಸಾಲಿನಲ್ಲಿ ಮಂಜೂರು ಮಾಡಿರುವ ಸಿಎಲ್–5(ಸಾಂದರ್ಭಿಕ) ಸನ್ನದುಗಳ ವಿವರಗಳು ಈ ಕೆಳಕಂಡಂತಿರುತ್ತವೆ.<br><table><tr><th>ಕ್ರ ಸಂ</th><th>2023–24</th><th>2024–25 (ಫೆಬ್ರವರಿ 2025ರ ಅಂತ್ಯಕ್ಕೆ)</th><th>ಒಟ್ಟು</th></tr><tr><td>1.</td><td>1881</td><td>2307</td><td>4188</td></tr></table>2025–26ನೇ ಸಾಲಿನ ಅಬಕಾರಿ ವರ್ಷ ಆರಂಭವಾಗಿರುವುದಿಲ್ಲ.<br>ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ. |
| ಆ) | ಖಾಸಗಿ ಸ್ಥಳಗಳಲ್ಲಿ ಮದುವೆ, ಮತ್ತಿತರ ವಿಶೇಷ ಸಂದರ್ಭದಲ್ಲಿ ಕಾರ್ಯಕ್ರಮಗಳಲ್ಲಿ ಅತಿಥಿಗಳಿಗೆ ಆಹ್ವಾನಿಕರಿಗೆ, ಸಂಬಂಧಿಕರಿಗೆ ಮದ್ಯ ವಿತರಿಸಲು ಯಾವ ಮಾನದಂಡವನ್ನು ವಿಧಿಸಲಾಗುವುದು;(ವಿವರ ನೀಡುವುದು) | ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 3(5) ರನ್ವಯ ಸಾರ್ವಜನಿಕ ಸಮಾರಂಭ ಹಾಗೂ ಸಮಾವೇಶಗಳಿಗೆ, ಒಂದು ದಿನದ ಸನ್ನದು (ಸಿಎಲ್–5) ನೀಡಲಾಗುತ್ತದೆ. ಸದರಿ ಸನ್ನದನ್ನು ಹೊಂದಿ ಮದ್ಯವನ್ನು ಸರಬರಾಜು ಮಾಡಲು ನಿಯಮ 8 ಮತ್ತು 8ಎ ರಲ್ಲಿ ನಿಗಧಿಪಡಿಸಿರುವಂತೆ ಒಂದು ದಿನಕ್ಕೆ ಸನ್ನದು ಶುಲ್ಕ ರೂ.10,000/– ಗಳು ಮತ್ತು ಹೆಚ್ಚುವರಿ ಸನ್ನದು ಶುಲ್ಕ ರೂ.1500/– ಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ಸನ್ನದುದಾರರು ಮದ್ಯವನ್ನು ಕೆ.ಎಸ್.ಬಿ.ಸಿ.ಎಲ್ ಡಿಪೋ, ಸಿಎಲ್–2 ಮತ್ತು ಸಿಎಲ್–(11–ಸಿ) ಸನ್ನದುಗಳಿಂದ ನೇರವಾಗಿ ಮದ್ಯವನ್ನು ಖರೀದಿಸಿ ಸಭೆ ಸಮಾರಂಭಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. ಸಿಎಲ್–5 ಸನ್ನದು ಷರತ್ತುಗಳನ್ನು ಪಾಲಿಸಬೇಕಾಗಿರುತ್ತದೆ. |

| | | |
|---|---|---|
| ಇ) | ಮದುವೆ ಮತ್ತಿತರ ಕಾರ್ಯಗಳಿಗೆ, ಅತಿಥಿಗಳಿಗೆ ನೀಡುವ ಮದ್ಯ ಸೇವನೆ, ಔತಣಕೂಟದಲ್ಲಿ ಮದ್ಯ ಮಾರಾಟದ ಪರವಾನಗಿ ನೀಡುವುದು ಸರಿಯೇ; ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು; ಯಾವ ಕಾರಣಕ್ಕಾಗಿ ಮಾರಾಟ ಪರವಾನಗಿ ನೀಡಲಾಗುತ್ತಿದೆ; ಈ ಬಗ್ಗೆ ಕಾನೂನಿನಲ್ಲಿ ತಿದ್ದುಪಡಿ ತರಲು ಕ್ರಮವಹಿಸಲಾಗಿದೆಯೇ;(ವಿವರ ನೀಡುವುದು) | ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 3 ರನ್ವಯ ಮದುವೆ, ಇತರೆ ಕೌಟುಂಬಿಕ ಕಾರ್ಯಕ್ರಮಗಳು, ಮನರಂಜನೆ ಕಾರ್ಯಕ್ರಮಗಳು ಹಾಗೂ ಇನ್ನಿತರೆ ಸಾರ್ವಜನಿಕ ಸಮಾರಂಭಗಳಿಗೆ ಸಿಎಲ್–5 (ಸಾಂದರ್ಭಿಕ) ಸನ್ನದನ್ನು ಸಾರ್ವಜನಿಕರು ಪಡೆಯಲು ಅವಕಾಶ ಇರುತ್ತದೆ.<br><br>ಕೆಲವು ಜನಾಂಗಗಳ ಕೌಟುಂಬಿಕ ಸಮಾರಂಭಗಳು ಹಾಗೂ ಔತಣಕೂಟಗಳಲ್ಲಿ ಮದ್ಯವನ್ನು ಸೇವಿಸುವ ಸಂಪ್ರದಾಯವಾಗಿರುತ್ತದೆ. ಇಂತಹ ಮದುವೆ, ಇತರೆ ಕೌಟುಂಬಿಕ ಕಾರ್ಯಕ್ರಮಗಳು, ಮನರಂಜನೆ ಕಾರ್ಯಕ್ರಮಗಳು ಹಾಗೂ ಇನ್ನಿತರೆ ಸಾರ್ವಜನಿಕ ಸಮಾರಂಭಗಳಲ್ಲಿ ಅಕ್ರಮ ಮದ್ಯ, ಸುಂಕ ರಹಿತ ಮದ್ಯ ಮತ್ತು ಅನಧಿಕೃತ ಮದ್ಯ ಸರಬರಾಜನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ನಿಯಮಾನುಸಾರ ಸಿಎಲ್–5 (ಸಾಂದರ್ಭಿಕ) ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದೆ. ಇಂತಹ ಸಮಾರಂಭಗಳಿಗೆ ಸಾರ್ವಜನಿಕರು ನಿಯಮಾನುಸಾರ ಸನ್ನದನ್ನು ಪಡೆದು ಮದ್ಯಬಳಕೆ ಮಾಡಿಕೊಂಡಲ್ಲಿ ಸಾರ್ವಜನಿಕರು ಸರ್ಕಾರದ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಿದಂತಾಗುತ್ತದೆ ಹಾಗೂ ಇದರಿಂದ ಸರ್ಕಾರದ ರಾಜಸ್ವವು ಹೆಚ್ಚಾಗುತ್ತದೆ.<br><br>ಸಿಎಲ್–5 (ಸಾಂದರ್ಭಿಕ) ಸನ್ನದುಗಳನ್ನು ಪಡೆಯಲು ಈಗಾಗಲೇ ಕರ್ನಾಟಕ ಅಬಕಾರಿ(ದೇಶೀ ಮತ್ತು ವಿದೇಶೀ ಮದ್ಯ ಮಾರಾಟ) ನಿಯಮಗಳು,1968ರ ನಿಯಮ 3(5) ರಂತೆ ಜಾರಿಯಲ್ಲಿರುವುದರಿಂದ ಸದರಿ ನಿಯಮಗಳಿಗೆ ಪ್ರಸ್ತುತ ಯಾವುದೇ ತಿದ್ದುಪಡಿ ತರುವ ಪ್ರಸ್ತಾವನೆ ಇರುವುದಿಲ್ಲ. |
| ಈ) | ಒಂದು ದಿನದ ಮದ್ಯ ಮಾರಾಟ ಪರವಾನಗಿ ನೀಡುವ ಸಂದರ್ಭದಲ್ಲಿ ಅಬಕಾರಿ ಅಧಿಕಾರಿಗಳು ಕಿರುಕುಳ ನೀಡುವುದರ ಬಗ್ಗೆ ಅನೇಕ ದೂರುಗಳಿದ್ದು, ಪರವಾನಗಿ ನೀಡಲು | ಸಿಎಲ್–5 (ಸಾಂದರ್ಭಿಕ) ಸನ್ನದುಗಳನ್ನು ನೀಡುವ ಸಂದರ್ಭದಲ್ಲಿ ಈ ಕೆಳಕಂಡಂತೆ ಸರಳೀಕರಣ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>1. ಅರ್ಜಿದಾರರು ಸಿಎಲ್–5 (ಸಾಂದರ್ಭಿಕ) ಸನ್ನದುಗಳನ್ನು ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸನ್ನದನ್ನು ಪಡೆಯಬಹುದಾಗಿದೆ. ಹಾಗೂ ಸದರಿ ಸೇವೆಯನ್ನು |

| | | |
|---|---|---|
| | ನಿಯಮಗಳಲ್ಲಿ ಸರಳೀಕರಣ ಮಾಡಲು ತೆಗೆದುಕೊಳ್ಳುವ ಕ್ರಮವೇನು; | ಸಕಾಲ ವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.<br>2. ಸಿಎಲ್–5 (ಸಾಂದರ್ಭಿಕ) ಸನ್ನದುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಅಬಕಾರಿ ಉಪ ಆಯುಕ್ತರುಗಳಿಗೆ ಪ್ರತ್ಯಾಯೋಜಿಸಲಾಗಿರುತ್ತದೆ.<br>3. ಈ ಹಿಂದೆ ಸಿಎಲ್–5 (ಸಾಂದರ್ಭಿಕ) ಸನ್ನದುಗಳನ್ನು ಪಡೆಯಲು ಅರ್ಜಿದಾರರು ಪೊಲೀಸ್ ಠಾಣೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಸಲ್ಲಿಸಬೇಕಾಗಿತ್ತು, ಆದರೆ, ಪ್ರಸ್ತುತ ಸನ್ನದನ್ನು ಪಡೆಯಲು ಪೊಲೀಸ್ ಠಾಣೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದಕ್ಕೆ ವಿನಾಯಿತಿ ನೀಡಲಾಗಿರುತ್ತದೆ.<br>4. ಅರ್ಜಿದಾರರು ಮದ್ಯವನ್ನು ಈ ಹಿಂದೆ ಕೆ.ಎಸ್.ಬಿ.ಸಿ.ಎಲ್ ಡಿಪೋಗಳಿಂದ ಮಾತ್ರ ಖರೀದಿಸಲು ಅವಕಾಶವಿದ್ದು, ಪ್ರಸ್ತುತ ಇದನ್ನು ಮಾರ್ಪಡಿಸಿ ಸಿಎಲ್–2, ಸಿಎಲ್–11(ಸಿ) ಹಾಗೂ ಕೆ.ಎಸ್.ಬಿ.ಸಿ.ಎಲ್. ಡಿಪೋಗಳಿಂದ ಖರೀದಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಉ) | ಅಬಕಾರಿ ಇಲಾಖೆಯ ಅಧಿಕಾರಿಗಳು ಸರ್ಕಾರಕ್ಕೆ ಸಂಗ್ರಹಿಸುವ ಸುಂಕಗಿಂತ ಅವರುಗಳೇ ಇಂತಿಷ್ಟು ಪ್ರತಿ ತಿಂಗಳು ನೀಡಬೇಕೆಂದು ಫಿಕ್ಸ್ ಮಾಡಿಕೊಂಡಿರುವ ಕುರಿತು ಸರ್ಕಾರವು ಅವರುಗಳ ಮೇಲೆ ತೆಗೆದುಕೊಳ್ಳುವ ಕ್ರಮವೇನು? | ಈ ಬಗ್ಗೆ ದೂರುಗಳಿದ್ದಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮಗಳನ್ವಯ ಇಲಾಖಾ ವಿಚಾರಣಾ ಕೈಗೊಂಡು ಆರೋಪಗಳು ಸಾಬೀತಾದಲ್ಲಿ ಶಿಸ್ತುಕ್ರಮ ಜರುಗಿಸಲಾಗುತ್ತದೆ. |

**ಆಇ 11 ಇಎಲ್‌ಕ್ಯೂ 2025**

(ಆರ್.ಬಿ. ತಿಮ್ಮಾಪುರ)

ಅಬಕಾರಿ ಸಚಿವರು

| ಅನುಬಂಧ | | | | |
|---|---|---|---|---|
| ಕ್ರ.ಸಂ | ಜಿಲ್ಲೆಗಳು | 2023-24 | 2024-25 (28-02-2025 ರ ಅಂತ್ಯದವರೆಗೆ | ಒಟ್ಟು |
| 1 | ಬೆಂಗಳೂರು ನಗರ ಜಿಲ್ಲೆ - 1 | 96 | 116 | **212** |
| 2 | ಬೆಂಗಳೂರು ನಗರ ಜಿಲ್ಲೆ - 2 | 238 | 141 | **379** |
| 3 | ಬೆಂಗಳೂರು ನಗರ ಜಿಲ್ಲೆ - 3 | 19 | 16 | **35** |
| 4 | ಬೆಂಗಳೂರು ನಗರ ಜಿಲ್ಲೆ - 4 | 77 | 46 | **123** |
| 5 | ಬೆಂಗಳೂರು ನಗರ ಜಿಲ್ಲೆ - 5 | 87 | 90 | **177** |
| 6 | ಬೆಂಗಳೂರು ನಗರ ಜಿಲ್ಲೆ - 6 | 10 | 6 | **16** |
| 7 | ಬೆಂಗಳೂರು ನಗರ ಜಿಲ್ಲೆ - 7 | 58 | 70 | **128** |
| 8 | ಬೆಂಗಳೂರು ನಗರ ಜಿಲ್ಲೆ - 8 | 165 | 116 | **281** |
| 9 | ಕೋಲಾರ | 2 | 2 | **4** |
| 10 | ಬೆಂಗಳೂರು ಗ್ರಾಮಾಂತರ | 16 | 23 | **39** |
| 11 | ಚಿಕ್ಕಬಳ್ಳಾಪುರ | 33 | 30 | **63** |
| 12 | ರಾಮನಗರ | 19 | 21 | **40** |
| 13 | ತುಮಕೂರು | 2 | 2 | **4** |
| 14 | ಬಾಗಲಕೋಟೆ | 2 | 0 | **2** |
| 15 | ಬೆಳಗಾವಿ ಉತ್ತರ | 0 | 0 | **0** |
| 16 | ಬೆಳಗಾವಿ ದಕ್ಷಿಣ | 24 | 45 | **69** |
| 17 | ವಿಜಯಪುರ | 0 | 0 | **0** |
| 18 | ಧಾರವಾಡ | 4 | 6 | **10** |
| 19 | ಚಿಕ್ಕಮಗಳೂರು | 21 | 16 | **37** |
| 20 | ದಾವಣಗೆರೆ | 0 | 3 | **3** |
| 21 | ಹಾವೇರಿ | 0 | 0 | **0** |
| 22 | ಶಿವಮೊಗ್ಗ | 5 | 4 | **9** |
| 23 | ಬಳ್ಳಾರಿ | 4 | 6 | **10** |
| 24 | ವಿಜಯನಗರ | 2 | 0 | **2** |
| 25 | ಚಿತ್ರದುರ್ಗ | 0 | 1 | **1** |
| 26 | ಗದಗ | 1 | 0 | **1** |
| 27 | ಕೊಪ್ಪಳ | 0 | 0 | **0** |
| 28 | ಬೀದರ್ | 5 | 1 | **6** |
| 29 | ಕಲಬುರಗಿ | 2 | 1 | **3** |
| 30 | ರಾಯಚೂರು | 0 | 2 | **2** |
| 31 | ಯಾದಗಿರಿ | 0 | 0 | **0** |
| 32 | ದಕ್ಷಿಣ ಕನ್ನಡ | 502 | 1027 | **1529** |
| 33 | ಕೊಡಗು | 173 | 33 | **206** |
| 34 | ಉಡುಪಿ | 273 | 427 | **700** |
| 35 | ಉತ್ತರ ಕನ್ನಡ | 12 | 13 | **25** |
| 36 | ಚಾಮರಾಜನಗರ | 0 | 0 | **0** |
| 37 | ಹಾಸನ | 0 | 3 | **3** |
| 38 | ಮಂಡ್ಯ | 1 | 3 | **4** |
| 39 | ಮೈಸೂರು ನಗರ | 28 | 36 | **64** |
| 40 | ಮೈಸೂರು ಗ್ರಾಮಾಂತರ | 0 | 1 | **1** |
| ಒಟ್ಟು | | **1881** | **2307** | **4188** |

ಆಇ 11 ಇಎಲ್‌ಕ್ಯೂ 2025